# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ಇಲಾಖೆಯ ಚಾಲ್ತಿಯಲ್ಲಿರುವ ರಾಜ್ಯ ಮಟ್ಟದ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳನ್ನು 2022-23 ನೇ ಸಾಲಿನಲ್ಲಿ ಮುಂದುವರಿಸುವ ಬಗ್ಗೆ.

ಉಲ್ಲೇಖ:- (1) ಆದೇಶ ಸಂಖ್ಯೆ: ಪಸಂಮೀ/166/ಮೀಇಯೋ/2021, ದಿನಾಂಕ: 26-04-2021.
(2) ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DOF-TECHO-FYP1/18/2022 ದಿನಾಂಕ: 07-04-2022.

* * * * * *

12 APR 22

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ರಾಜ್ಯ ಮಟ್ಟದ ಹಾಗೂ ಕೇಂದ್ರ ಪುರಷ್ಕೃತ ಯೋಜನೆಗಳನ್ನು ಸಂಬಂಧಿಸಿದ ಹುದ್ದೆಗಳೊಂದಿಗೆ 2021-22ನೇ ಸಾಲಿಗೆ ಮುಂದುವರೆಸಿ ಆದೇಶಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು ಇವರ ಏಕ ಕಡತ ಪತ್ರದಲ್ಲಿ, ಸದರಿ ಆದೇಶದಂತೆ ಎಲ್ಲಾ ಚಾಲ್ತಿ ಯೋಜನೆಗಳು 31-03-2022 ರವರೆಗೆ ಮುಂದುವರೆಸಲಾಗಿದ್ದು, ರಾಜ್ಯದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಸದರಿ ಯೋಜನೆಗಳನ್ನು ಸಂಬಂಧಿಸಿದ ಹುದ್ದೆಗಳೊಂದಿಗೆ 2022-23ನೇ ಸಾಲಿನಲ್ಲಿಯೂ ಮುಂದುವರೆಸುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ, 2022-23ನೇ ಸಾಲಿಗೆ ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಯೋಜನೆಗಳ ವಿವರಗಳನ್ನು ಅನುಬಂಧ-1 ಮತ್ತು ಹುದ್ದೆಗಳ ವಿವರಗಳನ್ನು ಅನುಬಂಧ-2 ಮತ್ತು 3 ರಲ್ಲಿ ನೀಡುತ್ತಾ, ಸದರಿ ಯೋಜನೆಗಳನ್ನು ಸಂಬಂಧಪಟ್ಟ ಹುದ್ದೆಗಳೊಂದಿಗೆ 2022-23ನೇ ಸಾಲಿಗೆ ಅಂದರೆ ದಿನಾಂಕ: 01-04-2022 ರಿಂದ 31-03-2023 ರವರೆಗೆ ಮುಂದುವರೆಸಲು ಸರ್ಕಾರದ ಮಂಜೂರಾತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಹಿಂದೆ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2022-23ನೇ ಸಾಲಿಗೆ ಆಯವ್ಯಯದಲ್ಲಿನ ಅನುದಾನ ಕಲ್ಪಿಸಿರುವ ಯೋಜನೆ / ಕಾರ್ಯಕ್ರಮಗಳನ್ನು ಮುಂದುವರೆಸಲು ತೀರ್ಮಾನಿಸಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ ಸಂಖ್ಯೆ: ಪಸಂಮೀ ಇ-126 ಮೀಇಯೋ 2022, ಬೆಂಗಳೂರು ದಿನಾಂಕ: 11-04-2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೀನುಗಾರಿಕೆ ಇಲಾಖೆಯಲ್ಲಿ ಈ ಆದೇಶದ ಅನುಬಂಧ-1, 2 ಮತ್ತು 3 ರಲ್ಲಿ ವಿವರಿಸಿರುವಂತೆ ಚಾಲ್ತಿಯಲ್ಲಿರುವ ವಿವಿಧ ರಾಜ್ಯ ವಲಯ, ಕೇಂದ್ರ ವಲಯ ಮತ್ತು ಕೇಂದ್ರ ಪುರಸ್ಕೃತ

ಜಿಲ್ಲಾ ಪಂಚಾಯತ್ ಎಲ್ಲಾ ಯೋಜನೆಗಳನ್ನು ಮಾರ್ಪಾಡುಗಳಿಲ್ಲದೆ (without modifications) ಸಂಬಂಧಪಟ್ಟ ಹುದ್ದೆಗಳೊಂದಿಗೆ 2022-23ನೇ ಸಾಲಿಗೆ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಮುಂದುವರೆಸಿ ಆದೇಶಿಸಲಾಗಿದೆ.

1) ಅನುಮೋದಿತ ಕ್ರಿಯಾ ಯೋಜನೆಗಳನ್ವಯ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕದ್ದು.

2) ಮುಂದುವರೆಸಲು ಉದ್ದೇಶಿಸಲಾದ ಯೋಜನೆಗಳ ಸಿಬ್ಬಂದಿಯನ್ನು ಹೊಸದಾಗಿ ಸೃಜಿಸುವ ಹೊಸ ವಾಹನಗಳು ಮತ್ತು ಉಪಕರಣಗಳ ಖರೀದಿ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಪಿಡಿ/17/ಐಎಂಎಂ/2005 ದಿನಾಂಕ: 10-08-2005 ಮತ್ತು 28-03-2009 ಹಾಗೂ ಪಿಡಿ/05/ಐಎಂಎಂ/2010, ದಿನಾಂಕ: 03-04-2010ರಲ್ಲಿ ಸೃಜಿಸಲಾಗಿರುವ ಸಮಿತಿಗಳ ಮುಂದೆ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಿ ಸದರಿ ಸಮಿತಿಯ ಅನುಮೋದನೆ ಪಡೆದು ಸದರಿ ವಿಚಾರದಲ್ಲಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

3) 2022-23 ನೇ ಸಾಲಿಗೆ ಮುಂದುವರಿಸಲಾದ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸುವಲ್ಲಿ ಸದರಿ ಮಂಜೂರಾತಿಯು ಈ ಯೋಜನೆಗೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತವನ್ನು ಮೀರಕೂಡದು. ಸದರಿ ಕಾರ್ಯಕ್ರಮದಡಿ ಉಪಕರಣಗಳನ್ನು ಖರೀದಿಸುವುದು ಹಾಗೂ ಹೊಸ ಹುದ್ದೆಗಳನ್ನು ಸೃಜಿಸುವುದನ್ನು ಹೊರತುಪಡಿಸಿ ತತ್ಸಂಬಂಧ ಲೆಕ್ಕ ಶೀರ್ಷಿಕೆಯಲ್ಲಿ ಕಾಣಿಸಿದಂತೆ ನಿಯಮಾನುಸಾರ ಹಾಗೂ ರಾಜ್ಯ ಸರ್ಕಾರದ ಮತ್ತು ಭಾರತ ಸರ್ಕಾರದ ಯೋಜನಾ ಮಾರ್ಗಸೂಚಿಗಳಿಗೆ ಅನುಸಾರ ಯೋಜನೆಗಳನ್ನು ಅನುಷ್ಠಾನ ಗೊಳಿಸಿ ವೆಚ್ಚವನ್ನು ಭರಿಸತಕ್ಕದ್ದು. ವಾಹನಗಳನ್ನು ಖರೀದಿಸಲು ಸರ್ಕಾರ ಅನುಮತಿಸುವುದಿಲ್ಲ. ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆ ಗಳನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಕಾರಣಕ್ಕೂ ಭಾರತ ಸರ್ಕಾರದ ಯೋಜನಾ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದ್ದಲ್ಲ.

4) 2022-23ನೇ ಸಾಲಿಗೆ ಹಮ್ಮಿಕೊಂಡಿರುವ ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೊದಲು ಸರ್ಕಾರಿ ಆದೇಶ ಸಂಖ್ಯೆ: ಪಿಡಿ/9/ಪಿಎಂಎಂ/98 ದಿನಾಂಕ: 27-05-1998 ರನ್ವಯ ನಿಗದಿಪಡಿಸಿರುವ ಮಾರ್ಗಸೂಚಿಯನ್ನು ತಪ್ಪದೇ ಅನುಸರಿಸತಕ್ಕದ್ದು.

5) 2021-22ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದು, ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳನ್ನು 2022-23ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಅನುಮೋದನೆ/ಮಂಜೂರಾತಿ ದೊರೆತಿದ್ದಲ್ಲಿ ಮಾತ್ರ ಅಂತಹ ಯೋಜನೆಗಳನ್ನು 2022-23ನೇ ಸಾಲಿಗೆ ಮುಂದುವರೆಸಲಾಗಿದೆ ಎಂದು ಭಾವಿಸಿ ಅನುಷ್ಠಾನಗೊಳಿಸತಕ್ಕದ್ದು ಹಾಗೂ ಈ ಯೋಜನೆಗೆ ಹಣ ಬಿಡುಗಡೆ ಮಾಡುವ ಬಗ್ಗೆ ಆದೇಶ ಸಂಖ್ಯೆ: ಎಫ್‌ಡಿ/9/ಟಿಎಫ್‌ಪಿ/2004, ದಿ: 17-08-2004 ಹಾಗೂ ಎಫ್‌ಡಿ/01/ಟಿಎಫ್‌ಪಿ/2022, ದಿ: 04-04-2022 ರಲ್ಲಿ ಆದೇಶಿಸಿರುವಂತೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ಪಾಲಿಸತಕ್ಕದ್ದು.